

# ಸೌಂದರ್ಯದ ತವನಿಧಿ ಚಿತ್ಕುಲಾ

**ಮಾನಸ ಸರೋವರದಿಂದ ಹರಿದುಬರುವ ಸಟ್ಲೆಜ್ ನದಿ ಪಾತ್ರದಲ್ಲಿ ಸಾಗಿದರೆ ಚಿತ್ಕುಲಾ ಎನ್ನುವ ಹಳ್ಳಿ ಸಿಗುತ್ತದೆ. ಹಚ್ಚ ಹಸಿರು ಹುಲ್ಲುಗಾವಲು, ಬೆಟ್ಟಗಳಿಂದ ಹರಿದು ಬರುತ್ತಿದ್ದ ಕಾಲುವೆಗಳು ಹಳ್ಳಿಗೆ ಅಪೂರ್ವ ಶೋಭೆ ನೀಡಿವೆ. ಪ್ರಾಕೃತಿಕವಾಗಿ ಶ್ರೀಮಂತವಾಗಿದ್ದರೂ ಈ ಹಳ್ಳಿಯಲ್ಲಿನ ಜನಜೀವನ ಸರಳವಾದುದು.**

■ **ಎಸ್.ವಿ. ಲಕ್ಷ್ಮಿ ನಾರಾಯಣ**

ಪ್ರಪಂಚದಲ್ಲಿ ಅತ್ಯದ್ಭುತ ಮತ್ತು ನಿರಂತರ ಮನಸೆಳೆಯುವ ತಾಣ ಹಿಮಾಲಯ ಪರ್ವತ ಶ್ರೇಣಿ. ಎಷ್ಟು ಸಲ ಅದರ ಮಡಿಲಿಗೆ ಹೋದರೂ, ಇನ್ನೊಮ್ಮೆ ಹೋಗುವ ಆಸೆಯಾಗುತ್ತದೆ. ದೇವತಾ ಮೂರ್ತಿಯನ್ನು ನೋಡಲು ತವಕಿಸುವಂತೆ ಭಿನ್ನ ಭಿನ್ನ ಕೋನಗಳಿಂದ ಪರ್ವತ ಶ್ರೇಣಿಯ ಬಹುರೂಪವನ್ನು ಆದಷ್ಟು ಹತ್ತಿರದಿಂದ ಆಸ್ವಾದಿಸುವ ಉದ್ದೇಶದಿಂದ ನಾವು (ಸುಮಾರು) ಇಪ್ಪತ್ತು ಜನರು, 50 ವರ್ಷ ದಾಟಿದ ದೀರ್ಘ ಪ್ರವಾಸಗಳನ್ನು ಇಷ್ಟಪಡುವವರು (Voyagers) ಜೊತೆಯಾಗಿ ಹೊರಟೆವು. ನಮ್ಮ ಪ್ರವಾಸ ಪ್ರಾರಂಭವಾದದ್ದು ಚಂಡೀಗಢದಿಂದ, ಟೊಯೋಟಾ ಇನ್ನೋವಾದಲ್ಲಿ ನಾಲ್ಕು ಜನರಂತೆ ಐದು ವಾಹನಗಳಲ್ಲಿ ಹೊರಟೆವು. ಮುಖ್ಯ ಉದ್ದೇಶ ನಿಸರ್ಗವನ್ನು ಸಮೀಪದಿಂದ ಸವಿಯುವುದೇ ಆಗಿತ್ತು. ಸಮಯದ ಒತ್ತಡ ಇಲ್ಲದೆ ಎಲ್ಲಿ ವಾಹನವನ್ನು ನಿಲ್ಲಿಸಬೇಕೆಂದು ಅನಿಸುತ್ತದೆಯೋ ಅಲ್ಲಿ ನಿಂತು ಪ್ರಾಕೃತಿಕ ಸೌಂದರ್ಯವನ್ನು ಸವಿದು ಮುಂದೆ ಸಾಗುತ್ತಿದ್ದೆವು.

ಟಿಬೆಟ್ ಹೆದ್ದಾರಿ 22ರ ಮೂಲಕ 12 ಸಾವಿರ ಅಡಿಗಳ ಎತ್ತರದಲ್ಲಿರುವ ಕಿನ್ನೂರನ್ನು ತಲುಪಿ, ಕಿನ್ನೂರು ಕೈಲಾಷ ಬೆಟ್ಟಗಳ ಸರಣಿಯನ್ನು ವೀಕ್ಷಿಸುವುದು ನಮ್ಮ ಉದ್ದೇಶವಾಗಿತ್ತು. ಮಾನಸ ಸರೋವರದಿಂದ ಹರಿದುಬರುವ ಸಟ್ಲೆಜ್ ನದಿಯ ಪಾತ್ರದಲ್ಲೇ ನಮ್ಮ ಪ್ರಯಾಣ. ದಾರಿಯಲ್ಲಿ ಅನೇಕ ಹಿಂದೂ ಮತ್ತು ಬೌದ್ಧ ದೇವಾಲಯಗಳನ್ನು ಬೆಟ್ಟಗಳ ಹಿನ್ನಲೆಯಲ್ಲಿ ನೋಡುತ್ತಾ ಸಾಗಿದೆವು.

ಸರ್ವಾಭರಣ ಭೂಷಿತೆಯಾದ ಹೆಣ್ಣಿನಂತೆ ಪ್ರಕೃತಿ ಮೈದುಂಬಿ ತುಂಬಿನಿಂತಿತ್ತು. ಸೇಬು ಗಿಡಗಳು ಹಣ್ಣುಗಳ ಭಾರದಿಂದ ತೂಗುತ್ತಿದ್ದವು. ಹಣ್ಣುಗಳನ್ನು ಕಿತ್ತು, ರಟ್ಟಿನ ಪೆಟ್ಟಿಗೆಗಳಲ್ಲಿ ತುಂಬಿ ಸಾಗಿಸುವ ಕಾರ್ಯ ಪ್ರಾರಂಭವಾಗಿತ್ತು. ರಸ್ತೆಯ